ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಶೈಶಾ-2/ಭಾ.ವಿಷ.ವಿ/2020-21 ದಿನಾಂಕ: 27.10.2021

## ಸುತ್ತೋಲೆ

ವಿಷಯ: 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ/ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಶ್ರವಣದೋಷ, ಮೂಕತನ, ಕಲಿಕಾ ನ್ಯೂನತೆ ಮತ್ತು ಬುದ್ಧಿಮಾಂದ್ಯತೆಯಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗೆ ಭಾಗ-1ರಲ್ಲಿ ಒಂದು ಭಾಷಾ ವಿಷಯ ಕಲಿಕೆಯಿಂದ ವಿನಾಯಿತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಮಮ 65 ಪಿಹೆಚ್‌ಪಿ 2000, ಬೆಂಗಳೂರು ದಿನಾಂಕ 10.03.2000
2. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 42 ಟಿಪಿಯು 2004 ದಿನಾಂಕ: 26.03.2004
3. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಟಿಪಿಯು 2018, ಬೆಂಗಳೂರು ದಿನಾಂಕ 28.02.2018
4. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಶೈಶಾ-04/ಅ.ವಿ.ವಿ. ಹೆ.ಸೌ/2017-18 ದಿನಾಂಕ 28.02.20218
5. ಪದವಿ ಪೂರ್ವ ಶಿಕ್ಷಣ ಇಲಾಖೆಯ 2021-22ನೇ ಸಾಲಿನ ಮಾರ್ಗಸೂಚಿಗಳು

* * * * *

2021-22ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಶ್ರವಣದೋಷ, ಮೂಕತನ, ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗಾಗಿ ಉಲ್ಲೇಖ 01 ರಿಂದ 03 ರವರೆಗಿನ ಸರ್ಕಾರಿ ಆದೇಶದಂತೆ ಹಾಗೂ ಉಲ್ಲೇಖ 5 ರಲ್ಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ 2021-22ನೇ ಸಾಲಿನ ಮಾರ್ಗಸೂಚಿಯಂತೆ, ಭಾಷಾ ವಿನಾಯಿತಿ ಸೌಲಭ್ಯವನ್ನು ನೀಡಲಾಗುತ್ತಿದ್ದು, ಸದರಿ ಸೌಲಭ್ಯಗಳನ್ನು ಪಡೆಯಲು ಅಂದರೆ ಭಾಷಾ ವಿಷಯ ಕಲಿಕೆಯಿಂದ ವಿನಾಯಿತಿ ಪಡೆಯಲು ಅಗತ್ಯ ದಾಖಲೆಗಳನ್ನು ಉಲ್ಲೇಖ 05ರಲ್ಲಿ 2021-22ರ ಮಾರ್ಗಸೂಚಿ ಅಧ್ಯಾಯ IV ರಲ್ಲಿ ಸೂಚಿಸಿದಂತೆ ಸಂಬಂಧಪಟ್ಟ ಪ್ರಾಂಶುಪಾಲರು ಅರ್ಹ ವಿದ್ಯಾರ್ಥಿಗಳಿಂದ ದಾಖಲೆಗಳನ್ನು ಪಡೆದು, ಪರಿಶೀಲಿಸಿ ಕ್ರೋಢಿಕರಿಸಿ, ದೃಢೀಕರಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಇಲಾಖಾ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ವಯ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಮಾತ್ರ ಕೇಂದ್ರ ಕಛೇರಿಗೆ ಸಲ್ಲಿಸುವುದು. ಜಿಲ್ಲಾ ಉಪನಿರ್ದೇಶಕರಿಂದ ಸ್ವೀಕೃತವಾದ ಕೋಢೀಕೃತ ಮಾಹಿತಿಯನ್ನು ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಭಾಷಾ ವಿನಾಯಿತಿ ನೀಡಲಾಗುವುದು. SATS ತಂತ್ರಾಂಶದಲ್ಲಿ ವಿದ್ಯಾರ್ಥಿಯ ಭಾಷಾ ವಿಷಯದ ಮುಂದೆ ಪರೀಕ್ಷಾ ಅಂಕಗಳನ್ನು ನಮೂದಿಸುವಾಗ X ಎಂದು ನಮೂದಿಸಿದ್ದರೂ ವಿದ್ಯಾರ್ಥಿಯು ಕೇಂದ್ರ ಕಛೇರಿಯಿಂದ ಭಾಷಾ ವಿನಾಯಿತಿಯನ್ನು ಪಡೆದ ನಂತರ ವಿನಾಯಿತಿ ದೊರೆಯುವುದು. ಒಂದು ವೇಳೆ ವಿದ್ಯಾರ್ಥಿಯ ಭಾಷಾ ವಿನಾಯಿತಿ ತಿರಸ್ಕೃತಗೊಂಡಲ್ಲಿ ಸದರಿ ವಿದ್ಯಾರ್ಥಿಗಳಿಗೆ ಪುನ: ಸಂಬಂಧಿಸಿದ ಭಾಷೆಯಲ್ಲಿ ಪರೀಕ್ಷೆಗಳನ್ನು ನಡೆಸಿ ಅಂಕಗಳನ್ನು ನಮೂದಿಸಬೇಕಾಗುತ್ತದೆ. ಶೈಕ್ಷಣಿಕ ಶಾಖೆಯಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳ ಭಾಷಾವಿನಾಯಿತಿ ವಿವರವನ್ನು SATS ನಿಂದ ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲಾಗುವುದು.

ಉಪನಿರ್ದೇಶಕರಿಂದ ಭಾಷಾ ವಿನಾಯಿತಿಗಾಗಿ ಕ್ರೂಢೀಕೃತ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ 05.11.2021. ಪ್ರಾಂಶುಪಾಲರು / ಪೋಷಕರಿಂದ ಪ್ರತ್ಯೇಕವಾಗಿ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂತಿಮ ದಿನಾಂಕದ ನಂತರ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

R Kusum
28/10/2021
ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಅಗತ್ಯ ಕ್ರಮಕ್ಕಾಗಿ.
2. ಹೆಚ್ಚುವರಿ / ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲರ ಮಕ್ಕಳಿಗೆ ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ : ಸಕಇ 79 ಪಿಹೆಚ್‌ಪಿ 78 - ದಿನಾಂಕ : 16:12-1-78.
2) ಸರ್ಕಾರದ ಆದೇಶ ಸಂ : ಸಕಕಾ 141 ಪಿಹೆಚ್‌ಪಿ 92 - ದಿನಾಂಕ 30--6-92.
3) ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರ ಪತ್ರದ ಸಂ : ನಿಅಕಇ:ಭಾವಿ:93-94 -2000 - ದಿನಾಂಕ : 17-12-99.

ಪ್ರಸ್ತಾವನೆ :-

ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ ಮಾನ್ಯತೆ ಪಡೆದ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕೆಯಲ್ಲಿ ತೊಂದರೆಯಿರುವ ಮಕ್ಕಳು ಅಂದರೆ, ಲರ್ನಿಂಗ್ ಡಿಸೆಬಿಲಿಟಿ ಇರುವವರಿಗೆ ಅಲ್ಲದೆ ಬುದ್ಧಿಮಾಂದ್ಯ ಮಕ್ಕಳಿಗೂ ಸಹ ಎಲ್ಲಾ ಹಂತಗಳಲ್ಲಿ ಒಂದೇ ಒಂದು ಭಾಷೆಯನ್ನು ಕಲಿಯಲು ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗಳ ಅಭ್ಯಾಸದಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಕೆಲವು ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಇಂತಹ ಮಕ್ಕಳು ಮೊದಲನೆ ಭಾಷೆ ಸಹ ಕಲಿಯಬೇಕಾಗಿದ್ದು ಎರಡೂ ಭಾಷೆಗಳನ್ನು ಕಲಿಯಲು ಸಾಧ್ಯವಾಗದೇ ತೊಂದರೆಯಾಗುತ್ತಿರುವುದರಿಂದ ದ್ವಿತೀಯ, ತೃತೀಯ ಭಾಷೆ ಎಂದು ನಿರ್ಬಂಧಪಡಿಸದೇ ಶಿಕ್ಷಣ ಮಾಧ್ಯಮ ಭಾಷೆಯನ್ನು ಮಾತ್ರ ಕಲಿಯಲು ಅವಕಾಶ ನೀಡುವಂತೆ ನಿರ್ದೇಶಕರು, ಮೇಲೆ ಓದಲಾದ (3)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಬಗ್ಗೆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲೆ ಸೂಚಿಸಿರುವ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಹೊರೆಯಾಗದಿರುವುದು ಅಗತ್ಯವಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ : ಮಮಇ 65 ಪಿಹೆಚ್‌ಪಿ 2000, ಬೆಂಗಳೂರು, ದಿನಾಂಕ : 10-3-2000**

ಸರ್ಕಾರದ ಆದೇಶ ಸಂ:ಸಕಕಾ 141 ಪಿಹೆಚ್‌ಪಿ 92 ದಿನಾಂಕ : 30-6-92ರ ಆದೇಶವನ್ನು ಮಾರ್ಪಡಿಸಿ, ಮಾನ್ಯತೆ ಪಡೆದ ಶಾಲೆಯಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಶಿಕ್ಷಣ ಮಾಧ್ಯಮ ಭಾಷೆಯೊಂದನ್ನು ಮಾತ್ರ ಕಲಿಯಲು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹುಲಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಗೆ :
1) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ
2) ಎಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು; ಸಹಾಯಕ ನಿರ್ದೇಶಕರು; ಮಮಇ ಇಲಾಖೆ
3) ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ - ಇವರ ಆಪ್ತ ಸಹಾಯಕರಿಗೆ
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.